ಸಿದ್ಧಲಿಂಗ ಪಟ್ಟಣಶೆಟ್ಟಿ ಕಣ್ಣಲ್ಲಿ ಗೆಳೆಯ
ಗಿರಡ್ಡಿ ಗೋವಿಂದರಾಜ (22.09.1939 – 11.05.2018)

# ಮೂರ್ತರೂಪ
# ಗಿರಡ್ಡಿ ಗೋವಿಂದರಾಜ

ಕಲೆ: ಬಿ.ಜಿ. ಗುಜ್ಜಾರಪ್ಪ

ಗಿರಡ್ಡಿ ಗೋವಿಂದರಾಜ ಕಣ್ಮರೆಯಾಗಿ ಮೂರು ವರ್ಷ ಗತಿಸಿದುವು. ಕಾಲನ ಚಲನೆ ಅವಿರತ, ಪ್ರಶ್ನಾತೀತ. ಬದುಕು ಇತಿಹಾಸವಾಗುವುದು, ಚರಿತ್ರೆಯಾಗುವುದು ವಾಸ್ತವ, ಅದನ್ನು ನಿರಾಕರಿಸಲಾಗದು; ಆದರೆ ನಮಗೆ ಇಷ್ಟವಾದವರ ಬದುಕು, ಅದರೊಂದಿಗೆ ತಳಕು ಹಾಕಿಕೊಂಡ ನಮ್ಮದೂ ಬದುಕು ಚರಿತ್ರೆಯ ಗತಕ್ಕೆ ಸಲ್ಲುವುದನ್ನು ಕಣ್ಣಾರೆ ಕಾಣುವುದು, ಅನುಭವಿಸುವುದು ಕುಲುಮೆಯಲ್ಲಿ ಬೇಯುತ್ತ ನಿಂತ ಹಾಗೆ. ಇಂಥ ನೋವನ್ನು ದೂರಗೊಳಿಸಲು ಅಥವಾ ಕಡಿಮೆ ಮಾಡಿಕೊಳ್ಳಲು ಗಿರಡ್ಡಿಯ ಹೆಂಡತಿ ಸರೋಜಾ ತನ್ನ ಇನಿಯನ, ನಮ್ಮ ಗೆಳೆಯನ ಮೂರ್ತಿಯನ್ನು ಮಾಡಿಸಿರಬೇಕು. ಹೀಗೆ ತಮ್ಮವರ ಪ್ರತಿಮೆಯನ್ನು ಮಾಡಿಸಿ, ಮನೆಯ ಮುಂದೆ ಸ್ಥಾಪಿಸಿ, ಅದಕ್ಕೆ ನಿತ್ಯಸ್ಮರಣೆ, ಆರಾಧನೆ, ಪರೋಕ್ಷ ಮಂದಿರದ ಸ್ವರೂಪ ನೀಡಿದ್ದು ಸರೋಜಾ ಮಾಡಿದ ಹೊಸ ಕಾರ್ಯ. ಈ ಕಂಚಿನ ಪ್ರತಿಮೆಯನ್ನು ಬೆಂಗಳೂರಿನ ಕಲಾವಿದ ವೆಂಕಟಾಚಲಪತಿ ಮಾಡಿದ್ದಾರಂತೆ. ಯಾವುದೇ ಸಾಹಿತಿಯ ಮನೆಯ ಮುಂಬಾಗಿಲ ಪಕ್ಕದಲ್ಲಿ ಹೀಗೆ ಮೂರ್ತಿ ಅನಾವರಣ ಮಾಡಿಸಿದ್ದು ಕಾಣೆ. ವೈಚಾರಿಕ ನಿಲುವಿನ, ಮುಕ್ತ ಚಿಂತನೆಯ ಗಿರಡ್ಡಿ ಇಂಥ ವಿಚಾರವನ್ನು ಒಪ್ಪುತ್ತಿದ್ದನೋ ಇಲ್ಲವೋ... ಆದರೆ ಈಗ ಸರೋಜಾನೇ ಆ ಮನೆಯ ಸರ್ವಸ್ವ, ಅವಳ ನಿರ್ಧಾರವನ್ನು ಒಪ್ಪಿದ ಕುಟುಂಬದ ಸದಸ್ಯರು ಮತ್ತು ಆಪ್ತರು, ಶಿಷ್ಯರು, ಸಹೋದ್ಯೋಗಿಗಳು ಈಚೆಗೆ ಗಿರಡ್ಡಿಯ ಜನ್ಮದಿನದಂದು (ಸೆಪ್ಟೆಂಬರ್ 22) ಅವನ ಪ್ರತಿಮೆಯ ಅನಾವರಣ ಕಾರ್ಯಕ್ರಮದಲ್ಲಿ ಪಾಲುಗೊಂಡಿದ್ದೆವು.

ನಾವು ನಾಲ್ಕಾರು ಮಂದಿ ಗೆಳೆಯರು ಕಾಲೇಜಿನ ಮೊದಲ ದಿನಗಳಿಂದಲೇ ಕೂಡಿ ಕಲಿತವರು, ಅಲೆದಾಡಿ ನಲಿದವರು. 1957ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕೂಡಿದ ನಾವು ಗೆಳೆಯರಾಗಿ ಕಡೆಯ ವರೆಗೂ ಉಳಿದದ್ದು ಸಹ ಧಾರವಾಡದ ಮಿತ್ರರಲ್ಲಿ, ಸಾಹಿತಿಗಳಲ್ಲಿ ವಿಸ್ಮಯದ ಸಂಗತಿಯಾಗಿಯೇ ಉಳಿದಿದೆ. ಚಂಪಾ ನಮಗಿಂತ ಒಂದು ವರ್ಷ ಮುಂದೆ ಇದ್ದ; ಗಿರಡ್ಡಿ, ಪಿ.ಎಂ. ಹೆಗಡೆ, ಎನ್.ಎಸ್. ಹಿರೇಮಠ ಮತ್ತು ನಾನು ಬಹುತೇಕ ಎಲ್ಲ ಕ್ಲಾಸುಗಳಲ್ಲಿ ಮುಂಭಾಗದ ಮೊದಲ ಬೆಂಚಿನಲ್ಲಿಯೇ ಕೂಡುತ್ತಿದ್ದೆವು. ಗಂಭೀರವಾಗಿ ಪಾಠಗಳನ್ನು ಆಲಿಸುವುದು, ಪಾಠಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು, ಪ್ರಶ್ನೋತ್ತರದಲ್ಲಿ ಪಾಲುಗೊಳ್ಳುವುದು ನಮಗೆ ಪರೋಕ್ಷವಾಗಿ ಬೇರೆಯದೇ ಒಂದು ವ್ಯಕ್ತಿತ್ವವನ್ನು ನೀಡತೊಡಗಿತ್ತು. ಅದರ ಪರಿಣಾಮವಾಗಿಯೇ ನಾವು